**ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ: 5827 /2022**

ಪಿರ್ಯಾದುದಾರರು : ಕುದೂರು ಪೋಲಿಸು ಠಾಣೆ

**ವಿರುದ್ಧ**

**ಆರೋಪಿಗಳು : ಸಂತೋಷ್ ವೈ ಸಿ**

**ಚಾಸಾ:01/**ಪ್ರಾಸಾ:01

**ದಿನಾಂಕಃ 27-11-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ **ಸವಾಲು** :- **ಶ್ರೀ. ಜಿ ಹೆಚ್ ಎಂ.** ವಕೀಲರಿಂದ **ಆರೋಪಿಗಳ** ಪರವಾಗಿ:-

3. ದೂರನ್ನು ಯಾರು ತಯಾರಿಸಿರುತ್ತಾರೆ ಎಂದರೆ ಸಾಕ್ಷಿ ನಾನೇ ತಯಾಸಿರುತ್ತೇನೆ ಎಂದು ನುಡಿಯುತ್ತಾರೆ. ದೂರನ್ನು ಬರವಣಿಯ ಮುಕಾಂತರ ಸಲ್ಲಿಸಿರುತ್ತೀರ ಅಥವಾ ಬೆರಳಚ್ಚು ಮುಖಾಂತರ ಸಲ್ಲಿಸಿರುತ್ತಾರ ಸಾಕ್ಷಿಯು ನಾನೇ ಬರೆದು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ದೂರನ್ನು ಯಾವ ಸಮಯದಲ್ಲಿ ಪೋಲಿಸರಿಗೆ ನೀಡಿರುತ್ತೀರಿ ಎಂದರೆ ಸಾಕ್ಷಿಯ 05.20ರ ಸಮಯದಲ್ಲಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಈ ಘಟನೆಯ ಬಗ್ಗೆ ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ9 ಗಿರೀಶ್ ರವರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ9 ಗಿರೀಶ್ ರವರು ನಿಮಗೆ ಏನು ಆಗಬೇಕು ಎಂದರೆ ಸಾಕ್ಷಿಯು ನಮ್ಮ ಪಕ್ಕದ ಊರಿನವರು ಎಂದು ನುಡಿಯುತ್ತಾರೆ. ಈ ಘಟನೆಯ ಬಗ್ಗೆ ಚಾಸಾ9 ರವರು ನಿಮಗೆ ಯಾವಾಗ ಮಾಹಿತಿ ನೀಡಿರುತ್ತಾರೆ ಎಂದರೆ ಸಾಕ್ಷಿಯು ಸಂಜೆ 5.15 ಕ್ಕೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ದೂರಿನಲ್ಲಿ ಚಾಸಾ9ರವರು ಅಪಘಾತ ಬಗ್ಗೆ ಮಾಹಿತಿ ನೀಡಿರುತ್ತಾರೆ ಎಂದು ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ9 ರವರು ನಿಮಗೆ ಮಾಹಿತಿ ಕೊಟ್ಟಾಗ ನೀವು ಎಲ್ಲಿ ಇರುತ್ತೀರಿ ಎಂದರೆ ಸಾಕ್ಷಿಯು ಮನೆಯ ಬಳ್ಳಿ ಇದ್ದೇನು ಎಂದು ನುಡಿಯುತ್ತಾರೆ. ಘಟನಾ ಸ್ಥಳಕ್ಕೂ ಹಾಗೂ ನಿಮ್ಮ ಮನೆಗೂ ಎಷ್ಟು ಅಂತರವಿರುತ್ತದೆ ಎಂದರೆ ಸಾಕ್ಷಿಯು ಅರ್ಧ ಕಿಲೋಮಿಟರ್ ಅಂತರ ಇರುತ್ತದೆ ಎಂದು ನುಡಿಯುತ್ತಾರೆ. ನೀವು ಮನೆಯಲ್ಲಿದ್ದಾಗ ಕರೆ ಬಂದಿದ್ದು ಎಷ್ಟು ಗಂಟೆಗೆ ನೀವು ಘಟನಾ ಸ್ಥಳಕ್ಕೆ ಹೋಗಿರುತ್ತೀರಿ ಎಂದರೆ ಸಾಕ್ಷಿಯು 5.20ಕ್ಕೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ.

4. ಘಟನಾ ಸ್ಥಳಕ್ಕೆ ಯಾರು ಯಾರು ಹೋಗಿರುತ್ತೀರಿ ಹಾಗೂ ಹೇಗೆ ಹೋಗಿರುತ್ತೀರಿ ಎಂದರೆ ಸಾಕ್ಷ್ಮಿ ನಾನೊಬ್ಬನೆ ನಡೆದುಕೊಂಡು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಘಟನಾ ಸ್ಥಳಕ್ಕೆ ಹೋದಾಗ ಸುಮಾರು ಎಷ್ಟು ಟ ಜನ ಇದ್ದರು ಎಂದರೆ ಸಾಕ್ಷಿಯು ಸುಮಾರು 10 ಜನ ಇದ್ದರು ಎಂದು ನುಡಿಯುತ್ತಾರೆ. ಅವರ ಹೆಸರು ಹಾಗೂ ವಿಳಾಸ ಹೇಳ ಬಹುದ ಎಂದರೆ ಸಾಕ್ಷಿಯು ಹೇಳಬಹುದು ಎಂದು ನುಡಿಯುತ್ತಾರೆ. ಅವರುಗಳೆಂದರೆ ಲಕ್ಷ್ಮಣ, ರಾಮಚಂದ್ರಯ್ಯ, ಗಿರೀಶ್, ಜಯರಾಮ್, ತಿಮ್ಮೇಶ್, ಸದಾಶಿವಯ್ಯ ಇನ್ನು ಇತರರು ಇದ್ದರು ಎಂದು ನುಡಿಯುತ್ತಾರೆ. ಈ ಮೇಲೆ ಹೇಳಿರುವ ಹೆಸರಿನವರು ಯಾರಾದರು ಘಟನೆ ನೋಡಿದ ಬಗ್ಗೆ ಮಾಹಿತಿ ನೀಡಿರುತ್ತಾರ ಎಂದರೆ ಸಾಕ್ಷಿಯು ಚಾಸಾ 7 ಮತ್ತು 9 - ಲಕ್ಷ್ಮಣ ಮತ್ತು ಗಿರೀಶ್ ಹೇಳಿದ್ದಾರೆ ಎಂದು ನುಡಿಯುತ್ತಾರೆ. ಚಾಸಾ 7 ಮತ್ತು 9 ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ಪಕ್ಕದೂರಿನವರು ಎಂದು ನುಡಿಯುತ್ತಾರೆ. ಅವರಿಬ್ಬರನ್ನು ಹೊರತುಪಡಿಸಿ ಬೇರೆ ಯಾರಾದರು ಈ ಘಟನೆ ನೋಡಿದ ಬಗ್ಗೆ ಮಾಹಿತಿ ನೀಡಿರುತ್ತಾರ ಎಂದರೆ ಸಾಕ್ಷಿಯು ನೋಡಿದ್ದಾರೆ ಎಂದು ನುಡಿಯುತ್ತಾರೆ. ಅಪಘಾತವಾದ ವಾಹನದ ಸಂಖ್ಯೆ ಹೇಳಲು ಆಗುತ್ತದೆಯೇ ಎಂದರೆ ಸಾಕ್ಷಿಯು VERNA ಕಾರ್ 8347 ಎಂದು ನುಡಿಯುತ್ತಾರೆ.

5. ಈ ವಾಹನದ ಮಾಲೀಕರು ಹಾಗೂ ಅದನ್ನು ಅಪಘಾತವಾದ ದಿನ ಯಾರು ಚಾಲನೆ ಮಾಡುತ್ತಿದ್ದರು ಎಂದು ಹೇಳಲು ಆಗುತ್ತದ ಎಂದರೆ ಸಾಕ್ಷಿಯು ಮಾಲೀಕರು ಗೊತ್ತಿಲ್ಲ ಚಾಲಕ ಆರೋಪಿಯೇ ಎಂದು ನುಡಿಯುತ್ತಾರೆ. ಘಟನೆಯಾದಾಗ ಆರೋಪಿ ಘಟನ ಸ್ಥಳದಲ್ಲಿ ಇದ್ದರಾ ಅಥವಾ ಇಲ್ಲವಾ ಎಂದರೆ ಸಾಕ್ಷಿಯು ಇದ್ದರು ಎಂದು ನುಡಿಯುತ್ತಾರೆ. ಆರೋಪಿಯೆ ವಾಹನ ಚಾಲನೆ ಮಾಡುತ್ತಿದ್ದರು ಎಂದು ನಿಮಗೆ ಯಾರು ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ7 ಮತ್ತು 9 ರವರು ಆರೋಪಿ ಘಟನ ಸ್ಥಳದಲ್ಲಿ ಇದ್ದಾಗ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯ ಹೆಸರು ಸಂತೋಷ ಎಂದು ಯಾವಾಗ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ದೂರು ನೀಡುವ ಸಮಯದಲ್ಲಿ ಗೋತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ದೂರಿನಲ್ಲಿ ಆರೋಪಿ ಸಂತೋಷ ವಿರುದ್ದ ಕಾನೂನು ಕ್ರಮ ಕೈಗೊಳ್ಳಿ ಎಂದು ಕೋರಿರುತ್ತೀರ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನೀವು ಠಾಣೆಗೆ ನೀಡಿರುವ ದೂರನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡಿದ್ದೀರಿ ಎಂದರೆ ಸಾಕ್ಷಿಯು ತಿಳಿದುಕೊಂಡಿದ್ದೇನೆ ಎಂದು ನುಡಿಯುತ್ತಾರೆ .

6. ಘಟನೆ ಯಾವ ರೀತಿ ಆಯಿತು ಎಂದರೆ ಸಾಕ್ಷಿಯು ನನ್ನತಂದೆ ರಸ್ತೆಯಲ್ಲಿ ಹೋಗುವಾಗ ಆರೋಪಿ ಹಿಂದಿನಿಂದ ಬಂದು ಡಿಕ್ಕಿ ಪಡಿಸಿರುತ್ತಾರೆಂದು ನುಡಿಯುತಾರೆ . ಹಿಂದೆಯಿಂದ ಬಂದು ಅಪಘಾತ ಮಾಡಿರುತ್ತಾರೆ ಎಂದು ನಿಮ್ಮ ದೂರಿನಲ್ಲಿ ನಮೂದು ಮಾಡಿರುತತ್ತೀರಿ ಎಂದರೆ ಸಾಕ್ಷಿಯು ಮಾಡಿದ್ದೇನೆ ಎಂದು ನುಡಿಯುತ್ತಾರೆ . ಈ ರೀತಿ ಹಿಂದೆಯಿಂದ ಅಪಘಾತ ಮಾಡಿರುತ್ತಾರೆ ಎಂದು ನಿಮಗೆ ಯಾರು ಮಾಹಿತಿ ಕೊಟ್ಟಿದ್ದರು ಎಂದರೆ ಸಾಕ್ಷಿಯು ಸ್ಥಳಿಯರು ಹಾಗೂ ಚಾಸಾ7ಮತ್ತು 9ಎಂದು ನುಡಿಯುತ್ತಾರೆ . ಈ ರೀತಿ ಸ್ಥಳಿಯರು ಹಾಗೂ ಚಾಸಾ7ಮತ್ತು 9 ರವರು ಮಾಹಿತಿ ಕೊಟ್ಟರು ಎದು ನಿಮ್ಮದೂರಿನಲ್ಲಿ ನಮೂದು ಮಾಡಿರುತ್ತೀರ ಎಂದರೆ ಸಾಕ್ಷಿಯುು ಇಲ್ಲ ಎಂದು ನುಡಿಯುತ್ತಾರೆ. ಈ ಅಪಘಾತದಿಂದ ನಿಮ್ಮ ತಂದೆ ಯವರಿಗೆ ಎಲ್ಲೆಲ್ಲಿ ಏಟುಗಳು ಆಗಿದ್ದವು ಎಂದರೆ ಸಾಕ್ಷಿಯು 2 ಕಾಲು ಮುರಿದು ಹೋಗಿರುತ್ತದೆ ,ತಲೆ ಬುರುಡೆ ಹೊಳಾಗಿರುತ್ತದೆ ಎಂದು ನುಡಿಯುತ್ತಾರೆ .ಈವಿಚಾರವನ್ನು ನಿಮ್ಮ ದೂರಿನಲ್ಲಿ ನಮೂದು ಮಾಡಿರುತ್ತೀರ ಎಂದರೆ ಸಾಕ್ಷಿಯು ಮಾಡಿದ್ದೇನೆ ಎಂದು ನುಡಿಯುತ್ತಾರೆ. ಈ ಅಪಘಾತದಲ್ಲಿ ಕಾರಿನಲ್ಲಿ ಇರುವವರಿಗೆ ಪೆಟ್ಟಾಗಿರುತ್ತದ ಎಂದರೆ ಸಾಕ್ಷಿಯು ಆ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕಾರಿನಲ್ಲಿ ಎಷ್ಟು ಜನ ಇದ್ದರು ಎಂದು ನೀವು ತಿಳಿದುಕೊಂಡಿರುತ್ತೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಅಪಘಾತ ಆದ ಸ್ಥಳ ಎನ್ ಹೆಚ್ 75 ರಸ್ತೆ ಎಂದರೆ ಸರಿ . ಆ ರಸ್ತೆಯಲ್ಲಿ ನಿರಂತರವಾಗಿ ವಾಹನಗಳು ಹೋಗುತ್ತಿರುತ್ತವೆ ಹಾಗೂ ಬರುತ್ತಿರುತ್ತವೆ ಎಂದರೆ ಸರಿ. ಆ ರಸ್ತೆಯಲ್ಲಿ ಸಾಮಾನ್ಯವಾಗಿ ರಸ್ತೆಯನ್ನು ದಾಟುವಾಗ ಜಾಗರುಕತೆಯಿಂದ ರಸ್ತೆ ದಾಟಬೇಕು ಎಂದರೆ ಸರಿ. ನಿಮ್ಮ ತಂದೆಯವರಿಗೆ ಎಷ್ಟು ವಯಸಾಗಿರುತ್ತದೆ ಎಂದರೆ ಸಾಕ್ಷಿಯು 65-68 ಆಗಿರಬಹುದು ಎಂದು ನುಡಿಯುತ್ತಾರೆ. ಅವರು ಆರೋಗ್ಯವಾಗಿದ್ದರು ಎಂದರೆ ಸರಿ. ಅವರು ವಾಹನ ಚಾಲನೆ ಮಾಡಲು ಪರವಾನಿಗೆ ಇತ್ತ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆ ಚಾಲನೆ ಮಾಡುತ್ತಿದ್ದ ವಾಹನ ಸಂಖ್ಯೆ ಏನು ಎಂದರೆ ಸಾಕ್ಷಿಯು ಕೆಎ 42 ಆರ್ 9762 ಎಂದು ನುಡಿಯುತ್ತಾರೆ.

8. ಈ ವಾಹನ ಯಾರ ಹೆಸರಿನಲ್ಲಿ ಇದೆ ಎಂದರೆ ಅವರ ಅಣ್ಣನ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ಅಪಘಾತ ನಿಮ್ಮ ತಂದೆಯವರ ನಿರ್ಲಕ್ಷ್ಯತೆಯಿಂದ ಆಗಿರುತ್ತದೆ ಅವರು ರಸ್ತೆಯನ್ನು ದಾಟಲು ಏಕಏಕಿ ಬಂದಿರುತ್ತಾರೆ ಆಗಾಗಿ ಅಪಘಾತ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಯಾವುದೆ ಸೂಚನೆ ನೀಡಿದೆ ಏಕಏಕಿ ಬಂದಿರುತ್ತಾರೆ ಹಾಗೂ ವಾಹನ ಚಾಲನೆ ಮಾಡಲು ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಚಾಲನೆ ಮಾಡಲು ಬರುತ್ತದೆ ಎಂದು ನುಡಿಯುತ್ತಾರೆ. ಆ ಬಗ್ಗೆ ಪರವಾನಿಗೆಯನ್ನು ಪೋಲಿಸರಿಗೆ ನೀಡಿರುತ್ತೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

09. ನಿಪಿ2 ಮಹಜರ್ ನಲ್ಲಿರುವ ಅಂಶಗಳನ್ನು ತಿಳಿದುಕೊಂಡಿರುತ್ತೀರ ಎಂದರೆ ಸಾಕ್ಷಿಯು ತಿಳಿದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ನಿಪಿ2 ಕ್ಕೆ ಎಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಅಪಘಾತವಾದ ಸ್ಥಳದಲ್ಲಿ ಮಾಡಿರುತ್ತೇನೆಂದು ನುಡಿಯಿುತ್ತಾರೆ. ಯಾವ ದಿನಾಂಕ ಯಾವ ಸಮಯದಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ದಿನಾಂಕ ಗೊತ್ತಿಲ್ಲ ಆದರೆ ಸಂಜೆ 4.00 ಗಂಟೆಯಲ್ಲಿ ಸಹಿ ಮಾಡಿರುತ್ತೇವೆಂದು ನುಡಿಯುತ್ತಾರೆ. ಸಹಿ ಮಾಡಿರುವ ನಿಕರವಾದ ಸ್ಥಳವನ್ನು ಹೇಳಲು ಆಗುತ್ತದೇಯಾ ಎಂದರೆ ಸಾಕ್ಷಿಯು ರಸ್ತೆಪಾಳ್ಯ ಎಂದು ನುಡಿಯುತ್ತಾರೆ. ಸ್ಥಳಕ್ಕೆ ಬನ್ನಿ ಎಂದು ಪೋಲಿಸರು ನಿಮಗೆ ಮಾಹಿತಿ ನೀಡಿರುತ್ತಾರಾ ಎಂದರೆ ಸಾಕ್ಷಿಯು ನೀಡಿದ್ದರು ಎಂದು ನುಡಿಯುತ್ತ್ರಾರೆ. ನಿಮಗೆ ಮಾಹಿತಿಯನ್ನು ಕರೆ ಮುಖಾಂತರ ಅಥವಾ ನೋಟಿಸ್ ನೀಡಿರುತ್ತಾರ ಎಂದರೆ ಸಾಕ್ಷಿಯು ಕರೆ ಮಾಡಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ . ನಿಮಗೆ ಪೋಲಿಸರು ಮಾಹಿತಿ ನೀಡಿದಾಗ ನೀವು ಎಲ್ಲಿ ಇರುತ್ತೀರಿ ಎಂದರೆ ಸಾಕ್ಷಿಯು ನನಗೆ 2 ಗಂಟೆಯ ಮುಂಚೆಯೆ ಮಾಹಿತಿ ನೀಡಿರುತ್ತಾರೆಂದು ನುಡಿಯುತ್ತಾರೆ .ನಾನು ಆಗ ಮನೆಯಲ್ಲಿಯೇ ಇದ್ದೇನು ಎಂದು ನುಡಿಯುತ್ತಾರೆ. ನಿಮಗಲ್ಲದೆ ಬೇರೆ ಯಾರಿಗೆ ಮಾಹಿತಿ ನೀಡಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ 7 ಮತ್ತು 8 ರವರಿಗೆ ಮಾಹಿತಿ ನೀಡಿರುತ್ತಾರೆಂದು ನುಡಿಯುತ್ತಾರೆ. ಅವರಿಗೆ ಸ್ಥಳಕ್ಕೆ ಬರಲು ನೋಟಿಸ್ ನೀಡಿದ್ದರ ಅಥವಾ ಕರೆ ಮಾಡಿದ್ದರ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೀವು ಸ್ಥಳಕ್ಕೆ ಯಾವಾಗ ಹೋಗಿರುತ್ತೀರಿ ಎಂದರೆ ಸಾಕ್ಷಿಯು ಸಂಜೆ 4.00 ಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಹೋದ ನಂತರ ಚಾಸಾ 7 ಮತ್ತು 8 ಯಾವಾಗ ಬಂದಿರುತ್ತಾರೆ ಎಂದರೆ ಸಾಕ್ಷಿಯು 4.30 ಕ್ಕೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ.

10. ಮಹಜಾರನ್ನು ಎಷ್ಟು ಗಂಟೆಗೆ ಶುರು ಮಾಡಿ ಎಷ್ಟು ಗಂಟೆಗೆ ಮುಗಿಸಿರುತ್ತಾರೆ ಎಂದರೆ ಸಾಕ್ಷಿಯು 4.30 ರಿಂದ 5.00 ಗಂಟೆಯ ಜರುಗಿಸಿರುತ್ತಾರೆ ಎಂದು ನುಡಿಯುತ್ತಾರೆ. ಸ್ಥಳಕ್ಕೆ ಯಾವ ಪೋಲಿಸ್ ಅಧಿಕಾರಿ ಬಂದಿದ್ದರು ಎಂದರೆ ಸಾಕ್ಷಿಯು ಅವರ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರೊಬ್ಬರೆ ಬಂದಿದ್ದರ ಅಥವಾ ಬೇರೆ ಯಾರಾದರು ಬಂದಿದ್ದರ ಎಂದರೆ ಸಾಕ್ಷಿಯು ಅವರ ಜೊತೆ ಮತ್ತೊಬ್ಬರು ಬಂದಿದ್ದರು ಎಂದು ನುಡಿಯುತ್ತಾರೆ. ನೀವು ಹೋಗುವ ಮುಂಚೆಯೆ ಪೋಲಿಸರು ಬಂದಿದ್ದರ ಅಥವಾ ನೀವು ಹೋದ ನಂತರ ಬಂದರ ಎಂದರೆ ಸಾಕ್ಷಿಯು ನಾವು ಹೋದ ನಂತರ ಬಂದರು ಎಂದು ನುಡಿಯುತ್ತಾರೆ. ಮಹಜರ್ ಸಮಯದಲ್ಲಿ ಎಷ್ಟು ಜನ ಸೇರಿದ್ದರು ಎಂದರೆ ಸಾಕ್ಷಿಯು ಯಾರು ಇರಲಿಲ್ಲ ಎಂದು ನುಡಿಯುತ್ತಾರೆ. ಮಹಜರ್ ಸ್ಥಳದ ಚಕ್ಕುಬಂದಿ ಪೂರ್ವಕ್ಕೆ - ರಸ್ತೆ , ಪಶ್ಚಿಮಕ್ಕೆ - ರಸ್ತೆ , ಉತ್ತರಕ್ಕೆ - ರಸ್ತೆ , ದಕ್ಷಿಣಕ್ಕೆ - ವೆಂಕಟಪ್ಪನವರ ಜಮೀನಿನು ಇದೆ ಎಂದು ನುಡಿಯುತ್ತಾರೆ. ಇದನ್ನು ಪೋಲಿಸರು ಮಹಜರ್ ನಲ್ಲಿ ಬರೆದುಕೊಂಡಿದ್ದಾರ ಎಂದರೆ ಸಾಕ್ಷಿಯು ಬರೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನೀವು ಓದಿ ತಿಳಿದುಕೊಂಡಿದ್ದೀರ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

11. ಸ್ಥಳ ಮಹಜಾರ್ ಸಮಯದಲ್ಲಿ ಯಾವುದಾದರು ವಸ್ತುಗಳನ್ನು ಅಮಾನತು ಪಡಿಸಿಕೊಂಡಿರುತ್ತಾರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಅಪಘಾತಕ್ಕೆ ಒಳಗಾದ ವಾಹನಗಳು ಎಲ್ಲೆಲ್ಲಿ ಜಖ್ಮಗೊಂಡಿದ್ದವು ಎಂದರೆ ಸಾಕ್ಷಿಯು ಕಾರಿನ ಎಡ ಭಾಗ ಜಖ್ಮ ಆಗಿರುತ್ತದೆ .ಬೈಕಿನ ಬಲಭಾಗ ಜಖ್ಮ ಆಗಿರುತ್ತದೆ ಎಂದು ನುಡಿಯುತ್ತಾರೆ . ಈ ವಿಚಾರ ಮಹಜರ್ ನಲ್ಲಿ ನಮೂದಾಗಿರುತ್ತದ ಎಂದರೆ ಸಾಕ್ಷಿಯು ಆಗಿದೆ ಎಂದು ನುಡಿಯುತ್ತಾರೆ. ಮಹಜರ್ ಸಮಯದಲ್ಲಿ ವಾಹನಗಳು ಎಲ್ಲಿ ಇದ್ದವು ಎಂದರೆ ಸಾಕ್ಷಿಯು ಠಾಣೆಯ ಬಳಿ ಇದ್ದವು ಎಂದು ನುಡಿಯುತ್ತಾರೆ. ನಿಮ್ಮ ಕುಟುಂಬದಲ್ಲಿ ನಿಮ್ಮ ಸ್ವಂತ ತಮ್ಮ ವಕೀಲರು ಎಂದರೆ ಸರಿ . ಅವರ ಹೆಸರು ಹೊಂಬೇಗೌಡ ಎಂದರೆ ಸರಿ . ನಿಮ್ಮ ತಮ್ಮ ವಕೀಲರಾದ್ದರಿಂದ ನಿಮ್ಮ ತಂದೆಯವರ ತಪ್ಪಿ ನಿಂದ ಅಪಘಾತವಾಗಿದ್ದರು ಸಹ ಆರೋಪಿಯ ತಪ್ಪಿ ನಿಂದ ಅಪಘಾತ ಆಗಿರುತ್ತದೆ ಎಂದು ಪರಿಹಾರ ಹಣವನ್ನು ಪಡೆದುಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಇರುವ ಆರೋಪಿ ಆದಿನ ವಾಹನವನ್ನು ಚಾಲನೆ ಮಾಡುತ್ತಿರಲಿಲ್ಲ ಆದರೆ ಆರೋಪಿ ಚಾಲನೆ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಮಹಜರ್ ಕ್ರಮ ಅನುಸರಿಸಿಲ್ಲ ನೀವು ಠಾಣೆಯಲ್ಲಿಯೇ ಮಹಜರ್ ಗೆ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಮುಂದೆ ನಕ್ಷೆಯನ್ನು ತಯಾರು ಮಾಡಿರುತ್ತಾರ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ . ನೀವು ನಕ್ಷೆಗೆ ಸಹಿ ಮಾಡಿರುತ್ತೀರ ಎಂದರೆ ಸಾಕ್ಷಿಯು ಮಾಡಿದ್ದೇನೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಅ.ನ್ಯಾ .ದಂ. ಮತ್ತು ಜೆ.ಎಂ.ಎಫ್.ಸಿ.**
**ಮಾಗಡಿ.**